ಸೀತಾಪುರದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಳೆದ ಮೂವತ್ತಮೂರು ವರುಷಗಳಿಂದ ಟೀಚರಾಗಿರುವ ಸಿಸಿಲಾಬ್ಯಾ ಮಕ್ಕಳಿಗೆ ಕಲಿಸುವುದರಲ್ಲಿ ನಂಬರ್ ಒನ್ ಎಂದು ಹೆಸರು ಪಡೆದವರು. ಆದರೆ ಕಳೆದ ಎರಡು ಮೂರು ವರುಷಗಳಿಂದೀಚೆಗೆ ಅವರ ಹೆಸರು ರಾರಾಜಿಸುತ್ತಿರುವುದು ಇದಕ್ಕಲ್ಲ. ಅವರ ಅಂಗಳದಲ್ಲಿ ಆಕೆಯೇ ನೆಟ್ಟು ಬೆಳೆಸಿದ ಮಾವಿನ ಮರದ ಹಣ್ಣುಗಳನ್ನು ಆಕೆ ಕೇಳಿದವರಿಗೂ ಅಲ್ಲದೆ ಕೇಳದವರಿಗೂ ನೀಡಿರುವುದರಿಂದ. ನಿಜವಾಗಿಯೂ ಈಗ ಹಣ್ಣು ಹಣ್ಣಾದ ಹಾಗಿರುವ ಟೀಚರಮ್ಮ ಹಣ್ಣು ಕೊಡುವಾಗ ಮಾತ್ರ ಒಂದು ಕಂಡಿಶನ್ ಹಾಕುತ್ತಾರೆ – 'ನೀವು 'ಹಣ್ಣು' ತಿಂದರೆ ಸಾಲದು. ತಿಂದಮೇಲೆ ಆ ಹಣ್ಣಿನ ಗೊರಟನ್ನು ಅಲ್ಲಿ ಇಲ್ಲಿ ಎಸೆಯಬೇಡಿ. ಗಿಡಮಾಡಿ ನೆಟ್ಟು ಬಿಡಿ! ಹಾಗೆ ಮಾಡಿದರೆ ಹತ್ತು ವರುಷದಲ್ಲಿ ನಮ್ಮ ಸೀತಾಪುರ ಗ್ರಾಮವು ಮಾವಿನ ಹಣ್ಣಿಗೆ ಹೆಸರಾದ ರತ್ನಗಿರಿಯನ್ನು ಹಿಂದಿಕ್ಕುತ್ತದೆ' ಎಂದು. ಅದು ಅವರ ಕನಸಾಗಿದ್ದರೂ, ಆ ಹಣ್ಣನ್ನು ಕೇಳಿ ಪಡೆದವರ ಕನಸೂ ಹಾಗೇ ಆಗುವ ಹಾಗೆ ಇದ್ದುದು ಆ ಮಾವಿನ ಹಣ್ಣಿನ ವಿಶೇಷ. ಯಾಕೆಂದರೆ ಆ ಹಣ್ಣುಗಳು ನೋಡಲು ಎಷ್ಟು ಚಂದ ಅಂದರೆ ಇದೇ ತಾನೇ ಎದೆ ತುಂಬುವ ಹುಡುಗಿಯ ಮೊಲೆಯ ಹಾಗಿರುತ್ತಿತ್ತು. ಮತ್ತು ಹಣ್ಣನ್ನು ಕತ್ತರಿಸಿ ಬಾಯಿಗೆ ಇಟ್ಟ ತಕ್ಷಣ ಅದು ಲೋಕೋತ್ತರದ ರುಚಿಯನ್ನು ತಿನ್ನುವವನ ನಾಲಿಗೆಗೂ ಮನಸ್ಸಿಗೂ ಒಟ್ಟಿಗೆ ನೀಡುತ್ತಿತ್ತು. ಇಂಥ ಹಣ್ಣಿನ ರುಚಿಯನ್ನು ಮೊದಲು ಸೀತಾಪುರದ ಶಾಲೆಯ ಮಾಸ್ಟ್ರುಗಳು ಸವಿದರೆ ಆಮೇಲೆ ಆ ಮಾಸ್ಟ್ರುಗಳು ಆ ರುಚಿಯನ್ನು ಅವರ ಬಂಧು ಭಗಿನಿಯರಿಗೆ ಹೇಳುತ್ತಾ ಬಂದುದರಿಂದ ಅಂಥವರಲ್ಲಿ ಕೆಲವರು ಸಿಸಿಲಾಬ್ಯಾ ಇದ್ದಲ್ಲಿಗೆ ಹಣ್ಣು ಬೇಡಿ ಬರುವುದು ಮೊದಲಾಯಿತು. ವಿಶೇಷವಾಗಿ ಊರಿನ ಅಧ್ಯಕ್ಷರಾದ ಸೀತಾರಾಮ ಶೆಟ್ಟರು, ದೇವಸ್ಥಾನದ ಅರ್ಚಕ ಕೃಷ್ಣ ಭಟ್ಟರು, ಜಮೀನುದಾರ್ ಪದ್ಮಣ್ಣಾಯರೂ ಖುದ್ದಾಗಿ ಆಕೆಯಿಂದ ಮಾವಿನಹಣ್ಣುಗಳನ್ನು ತರಿಸಿ ತಿಂದು ತೇಗಿದ್ದಾರೆ ಅಂದರೆ, ಅದು ಆ ಊರಿನ ಮಟ್ಟಿಗೆ ದೊಡ್ಡ ವಿಚಾರವೇ. ಹೀಗೆ ಮಾವಿನಹಣ್ಣು ಕೇಳಿ  ತಿಂದವರು ಅದರ ಬೀಜಗಳನ್ನು ಹಟ್ಟಿ ಗೊಬ್ಬರದ ಪುಡಿ ಮತ್ತು ಕೆಂಪು ಮಣ್ಣು ಮಿಶ್ರ ಮಾಡಿದ ಪ್ಲಾಸ್ಟಿಕ್ ತೊಟ್ಟೆಯಲ್ಲಿ ಹುಗಿದು ದಿನ ಬಿಟ್ಟು ದಿನ ಅದರ ಬದಿಗೆ ಹೋಗಿ 'ಮೊಳಕೆ ಬಂದಿದೆಯೋ ಹೇಗೆ?' ಎಂದು ನೋಡುವುದರಲ್ಲಿ ಸುಖ ಪಡುತ್ತಿದ್ದುದುಂಟು. ಅಷ್ಟೇ ಅಲ್ಲ, ಸಸಿ ಮಾಡಲು ಹೊರಟವರು ಪರಸ್ಪರ ಫೋನು ಮಾಡಿ 'ನನ್ನ ತೊಟ್ಟೆಯಲ್ಲಿ ಒಂದು ಸಣ್ಣ ಚಿಗುರು ಕಾಣುತ್ತಿದೆ ಮಾರಾಯರೇ. ನಿಮ್ಮದು ಏನಾಯಿತು?' ಎಂದು ವಿಚಾರಿಸುವ ತನಕ ಆ ಮಾವಿನಹಣ್ಣು ಆ ಊರಲ್ಲಿ ಪ್ರಭಾವ ಬೀರಿತ್ತು.

ಸಿಸಿಲಾ ಬಾಯಿ ಅಥವಾ ಸಿಸಿಲಾ ಟೀಚರು ಸೀತಾಪುರಕ್ಕೆ ಎಲ್ಲಿಂದ ಬಂದರು ಎನ್ನುವುದು ಈ ತನಕವೂ ಯಾರಿಗೂ ಗೊತ್ತಿಲ್ಲ. ಅವರು ಬರುವಾಗ ಎಂಟು ತಿಂಗಳ ಒಂದು ಮಗ ಅವರ ಕೈಯಲ್ಲಿತ್ತು ಎನ್ನುತ್ತಾರೆ ಅವರನ್ನು ಬಲ್ಲವರು. ಅಷ್ಟೇ ಅಲ್ಲ, ಆಕೆಯ ಗಂಡ ನಿಧನರಾಗಿದ್ದಾರೆ ಎನ್ನುವುದು ಮೊದಲು ಗೊತ್ತಾದದ್ದು ಶಾಲಾ ಅಭಿವೃದ್ಧಿ ಸಮಿತಿಯವರಿಗೆ ಮಾತ್ರ. ಇಂಥ ಟೀಚರಮ್ಮ ತನ್ನ ಸೇವೆಯ ಉದ್ದಕ್ಕೂ ಯಾರೊಬ್ಬರಿಗೂ ಕೆಡುಕಿನ ಒಂದು ಮಾತೂ ಆಡಿದವರಲ್ಲ ಅಥವಾ ಕೇಡು ಬಗೆದವರಲ್ಲ. ತಾನು ಕಲಿಸಲಿಕ್ಕಾಗಿಯೇ ಹುಟ್ಟಿದವಳು ಎನ್ನುವಂತೆ ಆಕೆ ಶ್ರದ್ಧೆಯಿಂದ ಮಕ್ಕಳಿಗೆ ಕಲಿಸುತ್ತಿದ್ದರು. ಇದರಿಂದಾಗಿ ಟೀಚರ್ ಇದ್ದರೆ ಹೀಗಿರಬೇಕು ಎನ್ನುವ ಗೌರವಕ್ಕೆ ಅವರು ಪಾತ್ರರಾಗಿದ್ದರು. ವಿಶೇಷ ಅಂದರೆ ಆಕೆ ಒಂದು